ಓ.ಎಸ್. ನಂಃ 233/2020
ಪಿ.ಡಬ್ಲ್ಯೂ-2 (ಬೀರಪ್ಪ)

ದಿನಾಂಕ: 29-01-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಪಾಟೀಸವಾಲುಃ ಶ್ರೀ.ಎಸ್.ಜಿ.ಟಿ. 1ನೇ ಪ್ರತಿವಾದಿ ಪರ ವಕೀಲರಿಂದಃ</u>**

8. ನನಗೆ ಪ್ರತಿವಾದಿ 2ಎ ಯಿಂದ 2ಇ ಇವರು ಯಾರ ವಾರಸುದಾರರು ಎಂದು ಗೊತ್ತಿಲ್ಲ. ನಾವು ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲೆಗಳು ತೆಗೆದು ನೋಡಿದಾಗ ಸದರಿಯವರು ಖೊಟ್ಟಿ ರೀತಿಯಿಂದ ತಮ್ಮ ಹೆಸರು ಹಚ್ಚಿಕೊಂಡಿದ್ದಾಗಿ ಸದರಿಯವರನ್ನು ಈ ದಾವೆಯಲ್ಲಿ ಸೇರಿಸಿದ್ದೇವು. ಪ್ರತಿವಾದಿ 2ಎ ಯಿಂದ 2ಇ ಇವರು ಗಂಗವ್ವ ಜಡೆಪ್ಪ ಹೊಸಮನಿ ಇವರು ವಾರಸುದಾರರು ಎಂದರೆ ಕಲ್ಲವ್ವ ಲಕ್ಷ್ಮಪ್ಪ ಹಾಲನ್ನವರ ಇವರ ವಾರಸುದಾರರು ಎಂದರೆ ಸರಿಯಲ್ಲ. ಅಪ್ಪೋಜೆಪ್ಪ ಇವರಿಗೆ 1 ಮತ್ತು 2ನೇ ಪ್ರತಿವಾದಿ ಹೆಣ್ಣು ಮಕ್ಕಳು ಎಂದರೆ ಸರಿಯಲ್ಲ. ಗಂಗವ್ವ ಇವರ ವಾರಸುದಾರರು ಪ್ರತಿವಾದಿ 2ಎ ಯಿಂದ 2ಇ ಎಂದರೆ ನನಗೆ ಗೊತ್ತಿಲ್ಲ.

9. ನಿಪಿ-5ರ ಪ್ರಕಾರ ಯಮನವ್ವ, ಮಾಯವ್ವ ಮತ್ತು ಗಂಗವ್ವ ಇವರ ನಡುವೆ ವಾಟ್ನಿ ಆಗಿದೆ ಎಂದರೆ ಸರಿಯಲ್ಲ, ಸದರಿ ನಿಪಿ-5 ಖೊಟ್ಟಿಯಾಗಿ ಮಾಡಿಕೊಂಡಿರುತ್ತಾರೆ. ಸದರಿ ವಾಟ್ನಿಯ ಪ್ರಕಾರ ಯಮನವ್ವ ಇವರಿಗೆ 02ಎ-14ಗು ಹಾಗೂ ಮಾಯವ್ವ ಮತ್ತು ಗಂಗವ್ವ ಇವರಿಗೆ ಜಂಟಿಯಾಗಿ 03ಎ-15ಗು ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ಸದರಿ ವಾಟ್ನಿ ಪ್ರಕಾರ 02ಎ-14ಗು ಜಮೀನಿನಲ್ಲಿ ಯಮನವ್ವ ಮತ್ತು 03ಎ-15ಗು ಜಮೀನಿನಲ್ಲಿ

ಮಾಯವ್ವ ಮತ್ತು ಗಂಗವ್ವ ಕಬ್ಜೆಯಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ದಿನಾಂಕ 13/12/1995 ರಂದು ಯಮನವ್ವ ಇವರು ತಮ್ಮ ಪಾಲಿನ 02ಎ-14ಗು ಆಸ್ತಿಯನ್ನು ಅವರ ಮೊಮ್ಮಗಳಾದ ಸಿದ್ದವ್ವ ಇವರಿಗೆ ಮೃತ್ಯು ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಅದು ಖೊಟ್ಟಿಯಾಗಿ ಮಾಡಿಕೊಂಡಿದ್ದಾಗಿ ಹೇಳುತ್ತಾರೆ. ಯಮನವ್ವ ಇವರ ಮರಣಾ ನಂತರ 02ಎ-14ಗು ಜಮೀನಿಗೆ ಸಿದ್ದವ್ವ ಇವರ ಹೆಸರು ದಾಖಲಾಗಿರುತ್ತದೆ ಎಂದರೆ ಅದು ಖೊಟ್ಟಿ ಇದೆ ಎಂದು ಹೇಳುತ್ತಾರೆ.

10. ನಂತರ ಸಿದ್ದವ್ವ ಇವರು ತಮಗೆ ಬಂದ 02ಎ-14ಗು ಜಮೀನನ್ನು ಅವರ ಮಕ್ಕಳಾದ ಪ್ರತಿವಾದಿ 4 ಮತ್ತು 5 ರವರಿಗೆ ಹಕ್ಕು ಬಿಟ್ಟು ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ಡೈರಿ ನಂ.3407, 3429, 3599, 3015, 126/2020-21, ಮತ್ತು 19/2011-12 ರ ಆದೇಶದ ವಿರುದ್ಧ ನಾನು ಅಪೀಲು ಸಲ್ಲಿಸಿರುತ್ತೇನೆ. ನಾನು ಸಲ್ಲಿಸಿದ ಅಪೀಲುಗಳು ವಜಾ ಆಗಿರುತ್ತವೆ ಎಂದರೆ ಸರಿ. ಸದರಿ ಅಪೀಲುಗಳು ವಜಾ ಆಗಿದ್ದರೂ ಸಹ ಪುನಃ ಈ ಮೇಲೆ ಹೇಳಿದ ಡೈರಿಗಳ ವಿರುದ್ಧ ಅಪೀಲು ಸಲ್ಲಿಸಿದ್ದೆ ಎಂದರೆ ಸರಿ.

11. ನಿಪಿ-19 ರಲ್ಲಿ 02ಎ-14ಗು ಜಮೀನು ಯಮನವ್ವ ಇವರ ಹೆಸರಿಗೆ ನಮೂದು ಇದೆ ಎಂದರೆ ಸರಿ. ಅದೇ ರೀತಿ 03ಎ-15ಗು ಜಮೀನು ಪ್ರತಿವಾದಿ 1 ಮತ್ತು 2 ರವರ ಹೆಸರಿಗೆ ನಮೂದು ಇದೆ ಎಂದರೆ ಸರಿ. ನಿಪಿ-29 ಆದ ದಿನಾಂಕದಂದು ಯಮನವ್ವ ಇವರ ಹೆಸರಿಗೆ 05ಎ-33ಗು ಜಮೀನು ಇರಲಿಲ್ಲ

ಎಂದರೆ ಸರಿಯಲ್ಲ. ದಾವಾ ಆಸ್ತಿಗಳ ಪಹಣಿ ಪತ್ರಿಕೆಗಳನ್ನು ನಮ್ಮ ತಂದೆ ತೆಗೆಯಿಸುತ್ತಿದ್ದರು. ಯಮನವ್ವ ಇವರಿಗೆ ರಾಮದುರ್ಗ ತಾಲೂಕಿನ ಚಿಕ್ಕೊಪ್ಪ ಗ್ರಾಮಕ್ಕೆ ಮದುವೆ ಮಾಡಿಕೊಡಲಾಗಿತ್ತು ಎಂದರೆ ಸರಿ. ಸದರಿ ಯಮನವ್ವ ಇವರು ಚಿಕ್ಕೊಪ್ಪ ಗ್ರಾಮದಲ್ಲಿಯೇ ಮೃತಪಟ್ಟಿರುತ್ತಾರೆ ಎಂದರೆ ಸರಿ. ನಾನು ಯಮನವ್ವ ಇವರ ಜೊತೆ ಚಿಕ್ಕೊಪ್ಪ ಗ್ರಾಮದಲ್ಲಿ ಇರುತ್ತಿದ್ದೆ ಎಂದು ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆಸಿಲ್ಲ ಎಂದರೆ ಸರಿ.

12. ಯಮನವ್ವ ಇವರು 02ಎ-14ಗು ಜಮೀನಿಗೆ ಸಂಬಂಧಪಟ್ಟ ಹಾಗೆ ಮಾತ್ರ ಬ್ಯಾಂಕುಗಳಲ್ಲಿ ಸಾಲ ತೆಗೆದುಕೊಳ್ಳುತ್ತಿದ್ದರು ಎಂದರೆ ಸರಿ. ಈ ವಿಷಯ ನಮ್ಮ ತಂದೆಗೆ ಮಾತ್ರ ಗೊತ್ತು. ನಾನು ದಾವಾ ಆಸ್ತಿಯ ಉತಾರವನ್ನು ನನ್ನ ಅಜ್ಜನ ಕಾಲದಿಂದಲು ನೋಡಿಕೊಂಡು ಬರುತ್ತಿದ್ದೇನೆ. 1990ರಲ್ಲಿಯೇ ಯಮನವ್ವ ಇವರ ಹೆಸರಿಗೆ 02ಎ-14ಗು ಹಾಗೂ ಪ್ರತಿವಾದಿ 1 ಮತ್ತು 2 ರವರ ಹೆಸರಿಗೆ 03ಎ-15ಗು ಜಮೀನು ಇದ್ದ ಬಗ್ಗೆ ನನಗೆ ಮತ್ತು ನಮ್ಮ ತಂದೆಗೆ ಗೊತ್ತಿತ್ತು ಎಂದರೆ ಸರಿಯಲ್ಲ. ನನಗೆ ಮತ್ತು ನನ್ನ ತಂದೆಗೆ 1990 ರಿಂದಲೇ ಯಮನವ್ವ ಇವರ ಹೆಸರಿಗೆ 02ಎ-14ಗು ಹಾಗೂ ಪ್ರತಿವಾದಿ 1 ಮತ್ತು 2 ರವರ ಹೆಸರಿಗೆ 03ಎ-15ಗು ಜಮೀನು ಇದ್ದ ಬಗ್ಗೆ ಗೊತ್ತಿತ್ತು ಎಂದರೆ ಸರಿಯಲ್ಲ.

13. ದಿನಾಂಕ 13/12/1995 ರಂದು ಮೃತ್ಯು ಪತ್ರ ಮಾಡಿಕೊಟ್ಟಾಗಿನಿಂದ ಸಿದ್ದವ್ವ ಇವರೇ 02ಎ-14ಗು ಜಮೀನಿನ ಸ್ವಾಧೀನದಲ್ಲಿ ಇದ್ದಾರೆ ಮತ್ತು ಅದರ ಮೇಲೆ ಸಾಲ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

1990 ರಿಂದಲೇ ನನಗೆ ದಾವಾ ಆಸ್ತಿಯಲ್ಲಿ ಕ್ಷೇತ್ರ ವಿಂಗಡಣೆ ಆದಾಗಿನಿಂದ ಗೊತ್ತಿದ್ದರೂ ಸಹ ನಾವು ಯಾವುದೇ ಅಪೀಲು ಸಲ್ಲಿಸಿಲ್ಲ ಎಂದರೆ ತಮಗೆ ಕ್ಷೇತ್ರ ವಿಂಗಡಣೆ ಆದ ಬಗ್ಗೆ ಗೊತ್ತಾದ ನಂತರ ಅಪೀಲು ಸಲ್ಲಿಸಿದ್ದಾಗಿ ಹೇಳುತ್ತಾರೆ.

14. ನಿಪಿ-23 ನ್ನು ಕೊಟ್ಟ ಗ್ರಾಮ ಲೆಕ್ಕಾಧಿಕಾರಿಗಳು ಯಾರು ಎಂದು ನನಗೆ ಗೊತ್ತಿಲ್ಲ. ನಿಪಿ-23ನ್ನು ಗ್ರಾಮ ಲೆಕ್ಕಾಧಿಕಾರಿಗಳಿಗೆ ಕೊಡಲು ಬರುವುದಿಲ್ಲ ಆದ್ದರಿಂದ ನಾನು ಹಳಬರ ಜೊತೆ ಶಾಮೀಲಾಗಿ ನಿಪಿ-23ನ್ನು ಸೃಷ್ಟಿ ಮಾಡಿಕೊಂಡು ಹಾಜರಪಡಿಸಿದ್ದೇನೆ ಎಂದರೆ ಸರಿಯಲ್ಲ. ಛಾಪಾ ಕಾಗದವನ್ನು ಬರೆಯಲು ಯಾವ ಉದ್ದೇಶಕ್ಕಾಗಿ ಛಾಪಾ ತೆಗೆದುಕೊಳ್ಳಲಾಗಿದೆ ಎಂದು ಬರೆಯಲಾಗುತ್ತದೆ ಎಂದರೆ ಸರಿ.

15. ನಿಪಿ-29ರಲ್ಲಿ ಇರುವ ಛಾಪಾ ಕಾಗದ ಮೃತ್ಯು ಪತ್ರ ಬರೆಯಲು ಖರೀದಿ ಮಾಡಲಾಗಿದೆ ಎಂದು ಬರೆದಿಲ್ಲ ಎಂದರೆ ಸರಿ. ಸದರಿ ಛಾಪಾ ಕಾಗದದಲ್ಲಿ ಯಮನವ್ವ ಅಡಿವೆಪ್ಪ ಕರೆನ್ನವರ ಎಂದು ಖೊಟ್ಟಿ ರೀತಿಯಿಂದ ಬರೆದು ನಿಪಿ-29ನ್ನು ಸೃಷ್ಟಿ ಮಾಡಿಕೊಂಡಿದ್ದೇವು ಎಂದರೆ ಸರಿಯಲ್ಲ. ಪ್ರತಿವಾದಿ 1, 2 ಮತ್ತು 3 ರವರಿಗೆ ಸಂಬಂಧಪಟ್ಟ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ನಿಪಿ-29ನ್ನು ಸುಳ್ಳು ಸೃಷ್ಟಿ ಮಾಡಿಕೊಂಡಿದ್ದೇವೆ ಎಂದರೆ ಸರಿಯಲ್ಲ. ನಿಪಿ-29ರಲ್ಲಿ ಇರುವ ಹೆಬ್ಬಟ್ಟಿನ ಗುರುತು ಯಮನವ್ವ ಇವರ ಹೆಬ್ಬಟ್ಟಿನ ಗುರುತು ಎಂದು ಗುರುತಿಸಿ ಯಾರು ಸಹಿ ಮಾಡಿಲ್ಲ ಎಂದರೆ ಸರಿ. ನಿಪಿ-29ನ್ನು ಬರೆಯಲು ಛಾಪಾ ಕಾಗದವನ್ನು ಯಾರು ತಂದರು ಮತ್ತು ಎಲ್ಲಿಂದ

ತಂದರು ನನಗೆ ಗೊತ್ತಿಲ್ಲ. ಯಮನವ್ವ ಇವರು ತಮ್ಮ ಜೀವಿತ ಕಾಲದಲ್ಲಿ ಯಾವತ್ತೂ ಬೆಟಗೇರಿ ಗ್ರಾಮಕ್ಕೆ ಬಂದಿಲ್ಲ ಎಂದರೆ ಸರಿಯಲ್ಲ.

16. ನಿಪಿ-29 ರಂತೆ ಯಮನವ್ವ ಇವರು ನಮಗೆ ಯಾವುದೇಮೃತ್ಯು ಪತ್ರ ಬರೆದುಕೊಡದೇ ಇದ್ದರೂ ಸಹ ಯಾರದೋ ಹೆಬ್ಬಟ್ಟಿನ ಗುರುತನ್ನು ಹಾಕಿಸಿ ಯಮನವ್ವ ಇವರು ನಮಗೆ ಮೃತ್ಯು ಪತ್ರ ಬರೆದುಕೊಟ್ಟಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಯಮನವ್ವ ಇವರು 2009 ರಲ್ಲಿ ಮರಣ ಹೊಂದಿದ ನಂತರ ನಿಪಿ-29ರ ಪ್ರಕಾರ ನಾವು ನಮ್ಮ ಹೆಸರು ಹಚ್ಚಿ ಕೊಳ್ಳಲು ಅರ್ಜಿ ಕೊಟ್ಟಿಲ್ಲ ಎಂದರೆ ಸಾಕ್ಷಿದಾರರು ತಮಗೆ 2019 ರಂದು ಮೃತ್ಯು ಪತ್ರ ಸಿಕ್ಕಿರುತ್ತದೆ ಎಂದು ಹೇಳುತ್ತಾರೆ. ಮೃತ್ಯು ಪತ್ರವು ನನಗೆ 2019 ರಲ್ಲಿ ಸಿಕ್ಕಿದೆ ಎಂದು ನನ್ನ ವಾದ ಪತ್ರ ಮತ್ತು ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. 1995 ರಲ್ಲಿ ಯಮನವ್ವ ಇವರು ಸಿದ್ದವ್ವ ಇವರ ಹೆಸರಿಗೆ ಮೃತ್ಯು ಪತ್ರ ಮಾಡಿಕೊಟ್ಟ ಪ್ರಕಾರ 02ಎ-14ಗು ಜಮೀನಿಗೆ ಸಿದ್ದವ್ವ ಇವರ ಹೆಸರು ಹತ್ತಿದ್ದು ನಮಗೆ ಗೊತ್ತಾಗಿದ್ದರಿಂದ ನಾವು ನಮ್ಮ ಹೆಸರು ಹಚ್ಚಿಕೊಳ್ಳಲು ಯಮನವ್ವ ಇವರ ಮರಣಾ ನಂತರ ಅರ್ಜಿ ಕೊಟ್ಟಿಲ್ಲ ಎಂದರೆ ಸರಿಯಲ್ಲ.

17. ದಾವಾ ಆಸ್ತಿಯ ಕಬ್ಜೆಯಲ್ಲಿ ನಾವೇ ಇದ್ದೇವೆ ಎಂದು ತೋರಿಸಲು ಯಾವುದೇ ದಾಖಲೆಯನ್ನು ಕೊಟ್ಟಿಲ್ಲ. ದಾವಾ ಆಸ್ತಿಯಲ್ಲಿ ನಾವು ಕಬ್ಜಾ ವಹಿವಾಟಿಯಲ್ಲಿ ಇಲ್ಲದೇ ಇದ್ದುದ್ದರಿಂದ ನನ್ನ ಬಳಿ ಯಾವುದೇ ದಾಖಲೆ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 1 ಮತ್ತು 2 ರವರ ಅಸ್ತಿ

ಪಡೆದುಕೊಳ್ಳುವ ಉದ್ದೇಶದಿಂದ ಸುಳ್ಳು ದಾಖಲೆಗಳನ್ನು ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ.

18. ಅಪ್ಪೋಜೆಪ್ಪ ಇವರ ವಾರಸಾ ಪ್ರಮಾಣ ಪತ್ರವನ್ನು ನಾನು ಹಾಜರ ಮಾಡಿಲ್ಲ ಎಂದರೆ ಸರಿ. ತಹಸೀಲ್ದಾರರಿಂದ ಅಪ್ಪೋಜೆಪ್ಪ ಇವರ ವಾರಸಾ ಪ್ರಮಾಣ ಪತ್ರ ತೆಗೆದುಕೊಂಡಲ್ಲಿ ಅಪ್ಪೋಜೆಪ್ಪ ಇವರಿಗೆ ಎಷ್ಟು ಜನ ವಾರಸುದಾರರು ಇದ್ದಾರೆ ಎಂದು ಗೊತ್ತಾಗುತ್ತದೆ ಎಂದು ಹೇಳಿ ಅಪ್ಪೋಜೆಪ್ಪ ಇವರ ವಾರಸಾ ಪ್ರಮಾಣ ಪತ್ರವನ್ನು ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಮ್ಮ ದಾವೆಗೆ ಅನುಕೂಲ ಆಗಲಿ ಎಂದು ನನ್ನ ವಾದ ಪತ್ರದಲ್ಲಿ ವಂಶಾವಳಿಯನ್ನು ತೋರಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ 02ಎ-15ಗು ಮತ್ತು 03ಎ-15ಗು ಜಮೀನಿಗೆ ಪ್ರತ್ಯೇಕ ಚಕ್ಕಬಂದಿಗಳು ಇವೆ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀಸವಾಲುಃ ಶ್ರೀ.ಎಮ್.ವಾಯ್.ಜೆ. ಪ್ರತಿವಾದಿ 2ಎ ಯಿಂದ 2ಇ ರವರ ಪರ ವಕೀಲರಿಂದಃ**

ಪಾಟೀಸವಾಲಿಗೆ ಸಮಯ ಕೋರುತ್ತಾರೆ. ಸಮಯ ಕೊಡಲಾಯಿತು.
(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಪ್ರಕಾರ ಬೆರಳಚ್ಚು ಮಾಡಲಾಗಿದೆ)
ಓ ಹೇ ಕೇ ಸರಿ ಇದೆ

(ಉಮೇಶ ಎಸ್. ಅತನೂರೆ)
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು
ಗೋಕಾಕ.

ಸಾಕ್ಷಿಯ ಸಹಿ